Investigation Division on Minor Irrigation Works in Mysore.

389 SRI G. RAJUGOWDA (Hanur).—Will the Minister for Transport and Minor Irrigation be pleased to state :—

(a) whether it has come to their notice that the investigation of all schemes are being delayed as there is only one Minor Irrigation investigation division in Mysore District;

(b) the names of minor Irrigation schemes which were investigated by this division during 1975-76, 76-77. and 77-78 ; and when the works were started for which investigations were completed?

SRI M. M. J. SADYOJATHA (Minister for Transport and Minor Irrigation).—

(a) Yes.

(b) Statement of Minor Irrigation works that have been investigated is laid on the table of the House.

The investigate work during 1975-76, 76-77 and 77-78 and works sanctioned by the Government were started during the same years.

ಶ್ರೀ ಜಿ. ರಾಜೂಗೌಡ—ಸ್ವಾಮಿ, ಮೈಸೂರು ಜಿಲ್ಲೆಯಲ್ಲಿ ಸಣ್ಣ ನೀರಾವರಿ ಯೋಜನೆಗಳ ತನಿಖಾ ವಿಭಾಗವು ಒಂದೇ ಇರುವುದರಿಂದ ಎಲ್ಲಾ ಯೋಜನೆಗಳ ತನಿಖೆಯು ಬಹಳ ನಿಧಾವಾಗುತ್ತಿರುವುದು ನಿಜವೆಂದು ತಾವೇ ಒಪ್ಪಿಕೊಂಡಿದ್ದೀರಿ. ಇಲ್ಲಿಗೆ ಮತ್ತೊಂದು ತನಿಖಾ ವಿಭಾಗವನ್ನು ಯಾವಾಗ, ಎಲ್ಲಿ ತರುತ್ತೀರಿ ?

ಶ್ರೀ ಎಂ. ಎಂ. ಜೆ. ಸದ್ಯೋಜಾತ.—ಹಣದ ಅಭಾವವಿರುವುದರಿಂದ ತರುವುದಕ್ಕೆ ತಡವಾಗಿದೆ.

ಶ್ರೀ ಜಿ. ರಾಜೂಗೌಡ.—ಮೈಸೂರು ಜಿಲ್ಲೆಯಲ್ಲಿ ಈಗ ಇರತಕ್ಕ ಸಣ್ಣ ನೀರಾವರಿ ಯೋಜನೆಗಳು ಹಾಗೂ ತನಿಖೆ ಆಗಿರತಕ್ಕ ಯೋಜನೆಗಳನ್ನು ಬಿಟ್ಟು ಉಳಿದ ನೀರಾವರಿ ಕಾಮಗಾರಿಗಳು ಎಷ್ಟು ಎಂಬುದನ್ನು ಪತ್ತೆ ಹಚ್ಚಿದ್ದೀರಾ ?

ಶ್ರೀ ಎಂ. ಎಂ. ಜೆ. ಸದ್ಯೋಜಾತ.—ಪರಿಶೀಲನೆ ಮಾಡುತ್ತಿದ್ದೇವೆ. ವಿವರವನ್ನು ಕೊಡುತ್ತೇವೆ

ಶ್ರೀ ಜಿ. ರಾಜೂಗೌಡ.—ತಮ್ಮ ಉತ್ತರದಲ್ಲಿ ೧೯೭೭-೭೮ನೇ ಸಾಲಿನಲ್ಲಿ ಯಾವ ಯಾವ ನೀರಾವರಿ ಯೋಜನೆಗಳು ತನಿಖೆ ಮುಗಿದಿವೆಯೋ ಅವುಗಳೆಲ್ಲವೂ ಕಾರ್ಯಾರಂಭವಾಗಿವೆಯೆಂದು ಹೇಳಿದ್ದೀರಿ ಸರಗೂರು, ಸತ್ಕಗಾಲ ಮುಂತಾದ ಕಡೆ ತನಿಖೆ ಮುಗಿದಿದೆ. ಕೆಲಸ ಪ್ರಾರಂಭವಾಗಿಲ್ಲ, ಕೆಲಸ ಪ್ರಾರಂಭವಾಗಿದೆಯೆಂದು ತಾವು ಹೇಳಿದ್ದೀರಿ. ಮತ್ತೊಮ್ಮೆ ವಿಮರ್ಶೆ ಮಾಡಿ ಉತ್ತರವನ್ನು ಕೊಡಿ.

ಶ್ರೀ ಎಂ. ಎಂ. ಜೆ. ಸದ್ಯೋಜಾತ.—I want notice.

ಶ್ರೀ ಜಿ. ರಾಜೂಗೌಡ.—ಎಲ್ಲದಕ್ಕೂ ನೋಟೀಸನ್ನು ಕೇಳುತ್ತೀರಿ. ಈಗ ೧೯೭೭-೭೮ರಲ್ಲಿ ಸಣ್ಣ ನೀರಾವರಿ ಕಾಮಗಾರಿಗಳ ತನಿಖೆ ಮುಗಿದಿದೆಯೋ ಅಲ್ಲೆಲ್ಲಾ ಕಾರ್ಯವನ್ನು ಆರಂಭಿಸಲಾಗಿದೆಯೆಂದು ಹೇಳಿದ್ದೀರಿ. ಆದರೆ ನನ್ನ ತಾಲ್ಲೂಕಿನಲ್ಲಿ ತನಿಖೆ ಮುಗಿದಿದ್ದು ಕೆಲಸ ಪ್ರಾರಂಭವಾಗಿಲ್ಲ. ಉತ್ತರದಲ್ಲಿ ಕೆಲಸ ಪ್ರಾರಂಭವಾಗಿದೆಯೆಂದು ಹೇಳುತ್ತಿದ್ದೀರಿ.

SRI M. C. NANAIAH.—When supplementaries are being put, the concernad Minister should have neessary information. If he doesn't have the required information, he must pull up the concerned offic-

ers to supply the information. I request the Chair to direct the concerned Minister to get the answers from the concerned officers.

MR. SPEAKER.—There is some meaning in what the hon./Sri Nanaiah says.

ಶ್ರೀ ಸಿ. ಎಂ. ಇಬ್ರಾಹಿಂ.—ಪ್ರಶ್ನೆಗೆ ಸಂಬಂಧಪಡದ ಸಪ್ಲಿಮೆಂಟರಿ ಪ್ರಶ್ನೆಗಳನ್ನು ಸದಸ್ಯರುಗಳು ಕೇಳಿದರೆ, ಅದಕ್ಕೆ ಉತ್ತರವನ್ನು ತರಲು ಅಧಿಕಾರಿಗಳಿಗೆ ಬಹಳ ಕಷ್ಟವಾಗುತ್ತದೆ.

SRI M. C. NANAIAH.—Sir, unfortunately, we connot give sufficient notice to each and every supplementary.

ಅಧ್ಯಕ್ಷರು.—೧೯೭೭-೭೮ರಲ್ಲಿ ತನಿಖೆಯಾದ ಯೋಜನೆಗಳನ್ನು ಮಾಡಿಸಿ ಕೊಡಬೇಕೆಂದು ಮಾನ್ಯ ಸದಸ್ಯರ ಕೋರಿಕೆ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಸದಸ್ಯರ ಅಭಿಪ್ರಾಯದಂತೆ ಒಂದು ಪ್ರಶ್ನೆಯನ್ನು ಸದಸ್ಯರು ಕೇಳಿದಾಗ ಅದಕ್ಕೆ ತಕ್ಕ ಉತ್ತರವನ್ನು ಒದಗಿಸಿಕೊಡದಿದ್ದಾಗ, ಅಧಿಕಾರಿಗಳ ತಪ್ಪು ಎಷ್ಟಾಗುತ್ತದೆಯೋ ಅಷ್ಟೇ ತಪ್ಪು ಮಂತ್ರಿಗಳದೂ ಆಗುತ್ತದೆ. We are all responsibe for all those officers so far as we are concerned. ಈಗ ಅದಕ್ಕಾಗಿ ಒಂದು ನಿಯಮವನ್ನು ಅನುಸರಿಸುವುದು ಒಳ್ಳೆಯದು. ದಯವಿಟ್ಟು ಮಾನ್ಯ ಸದಸ್ಯರಾದ ರಾಜೂಗೌಡರೂ ತಮ್ಮ ಪ್ರಶ್ನೆಯನ್ನು ಓದಿ ನೋಡಲಿ. ಅವರು ತನಿಖೆ ಮುಗಿದಿರುವ ಕೆಲಸಗಳು ಯಾವಾಗ ಪ್ರಾರಂಭವಾದವೆಂದು ಕೇಳಿದ್ದಾರೆ. ಅದಕ್ಕೆ ಉತ್ತರವಾಗಿ ಸಂಬಂಧಪಟ್ಟ ಸಾಲಿನಲ್ಲಿ ತನಿಖೆ ಮುಗಿದ ಯೋಜನೆಗಳು ಮತ್ತು ಸರ್ಕಾರದಿಂದ ಮಂಜೂರಾದ ಯೋಜನೆಗಳು ಆಯಾ ವರುಷವೇ ಪ್ರಾರಂಭವಾಗಿವೆಯೆಂದು ಹೇಳಲಾಗಿದೆ. Approval will have to be given to those works which are to be taken up. ಇದರಲ್ಲಿ ಏನಿದೆಯೆಂದರೆ, ತನಿಖೆ ಮುಗಿದ ಮೇಲೆ ಸರ್ಕಾರದಿಂದ ಮಂಜೂರು ಆಗಬೇಕಾಗುತ್ತದೆ, ಇದನ್ನು ಮಂತ್ರಿಗಳು ತಮ್ಮ ಉತ್ತರದಲ್ಲಿ ಹೇಳಿದ್ದಾರೆ. ಆದರೆ ಕೆಲಸ ತೆಗೆದುಕೊಳ್ಳಬೇಕೆನ್ನುವುದರಲ್ಲಿ ಇನ್‌ವೆಸ್ಟಿಗೇಷನ್ ಆಗಬೇಕು, ಆ ನಂತರ ಅಪ್ರೂವಲ್ ಆಗಬೇಕು. ನೂರೆಂಟು ಕಡೆ ಇನ್‌ವೆಸ್ಟಿಗೇಷನ್ ಆದರೂ ಅಪ್ರೂವಲ್ ಸಿಗುವುದು ಹತ್ತಾರಕ್ಕೆ ಮಾತ್ರ. ಉತ್ತರದಲ್ಲಿ ಈ ವಿಷಯ ಹೇಳಿದೆ. ಸದಸ್ಯರು ತನಿಖೆ ಮುಗಿದಿರುವ ಯಾವ ಯಾವ ಯೋಜನೆಗಳಿಗೆ ಮಂಜೂರಾತಿ ಸಿಕ್ಕಿದೆ ಎಂದು ಪ್ರಶ್ನೆ ಕೇಳಿದ್ದರೆ ಆದಕ್ಕೆ ಉತ್ತರವನ್ನೀಡಬಹುದಾಗಿತ್ತು. ಆ ರೀತಿ ಉಪ ಪ್ರಶ್ನೆ ಕೇಳಿಲ್ಲ. ಒಂದು ವೇಳೆ ಕೇಳಿದ್ದರೂ ಮಂತ್ರಿಗಳು ಉತ್ತರವನ್ನು ಇಡುವುದಕ್ಕೆ ಹಿಂದೇಟು ಹಾಕುವವರಲ್ಲ.

ಶ್ರೀ ಜಿ. ರಾಜೂಗೌಡ.—ನನ್ನ ಪ್ರಶ್ನೆ, ೧೯೭೭-೭೮ರಲ್ಲಿ ಯಾವ ಯಾವ ಕಾಮಗಾರಿಗಳ ತನಿಖೆಗಳಾಗಿವೆಯೆಂಬುದನ್ನೂ ಒದಗಿಸಿದ್ದೀರಿ. ಮಂಜೂರಾಗಿರತಕ್ಕವು ಯಾವುವು ಎಂಬುದನ್ನೂ ಕೂಡ ಒದಗಿಸಿದ್ದೀರಿ. ಆದರೆ ಆ ಯೋಜನೆಗಳ ಕೆಲಸ ಇನ್ನೂ ಪ್ರಾರಂಭವಾಗಿಲ್ಲ. ಪುನರ್ವಿಮರ್ಶೆಮಾಡಿ ಉತ್ತರ ಕೊಡಿ ಎಂಬುದೇ ನನ್ನ ಪ್ರಶ್ನೆ. ನಾನು ನೀವು ಕೊಟ್ಟ ಉತ್ತರವನ್ನು ಅರ್ಥಮಾಡಿಕೊಂಡಿದ್ದೇನೆ.

ಶ್ರೀ ಎಂ. ಜೆ. ಸದ್ಯೋಜಾತ.—ಆ ಬಗ್ಗೆ ಒಂದು ದೊಡ್ಡ ಪಟ್ಟಿ ಇದೆ. ಅದನ್ನು ಸಭೆಯ ಮುಂದೆ ಇಡುತ್ತೇನೆ.

Backward Classes Commission Report ; Classification of Communities.

733 SRI BHEEMANNA KHANDRE (Bhalki).—Will the Minister of State for Social Welfare, Backward Classes and Women, Children Welfare be pleased to state :—

(a) the number of communities that were classified as Backward classes in the State prior to the issue of the G.O. No. DPAR 1 SBC 7